**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆಃ 160 /2024**

**ಸಾಕ್ಷಿಯನ್ನು ದಿಃ 20.08.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ</u> ಆರೋಪಿ ಪರ ಶ್ರೀ. NN ವಕೀಲರಿಂದಃ**

ನಾನು ಪಿ.ಯು.ಸಿ ಓದಿದ್ದೇನೆ. ನಾನು ಕಳೆದ 23 ವರ್ಷಗಳಿಂದ ಕೆ.ಎಸ್.ಆರ್.ಟಿ.ಸಿ. ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೇನೆ. ಪ್ರತೀವರ್ಷ ನಮ್ಮ ಇಲಾಖೆಯ ಮೇಲಾಧಿಕಾರಿಗಳಿಗೆ ಲೆಕ್ಕಪತ್ರ ಸಲ್ಲಿಸಬೇಕು ಎಂದರೆ ಸರಿ. ಅದರಲ್ಲಿ ಆದಾಯ, ವೆಚ್ಚ ಮತ್ತು ಹೊಣೆಗಾರಿಕೆ ಮತ್ತು ಯಾರಿಗಾದರೂ ಸಾಲ ಕೊಟ್ಟಿದ್ದರೆ ಅದರ ಬಗ್ಗೆ ನಮೂದಿಸಬೇಕು ಎಂದರೆ ಸರಿ. ಆರೋಪಿಗೆ ಸಾಲ ಕೊಟ್ಟ ಬಗ್ಗೆ ಆ ವರ್ಷದ ಲೆಕ್ಕಪತ್ರದಲ್ಲಿ ಹೇಳಿದ್ದಿರಾ ಎಂದರೆ ಹೇಳಿದ್ದೇನೆ. 2022 ರ ಲೆಕ್ಕಪತ್ರದಲ್ಲಿ ಹೇಳಿದ್ದೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. 2022ರ ಮಾರ್ಚ್ ತಿಂಗಳಲ್ಲಿ ಲೆಕ್ಕಪತ್ರ ಸಲ್ಲಿಸಿದ್ದೇನೆ. ನಾನು ಆರೋಪಿಗೆ ಸಾಲ ಕೊಟ್ಟ ಬಗ್ಗೆ ಆ ವರ್ಷದ ಲೆಕ್ಕಪತ್ರದಲ್ಲಿ ನಮೂದಿಸದೇ ಇರುವ ಕಾರಣ ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸಲ್ಲಿಸಿರುವ ಈ ದೂರಿನ ಬಗ್ಗೆ ನಾನು ಲೆಕ್ಕಪತ್ರದಲ್ಲಿ ಹೇಳಿಲ್ಲ. ನನ್ನ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ಆರೋಪಿಗೆ ಸಾಲ ಕೊಟ್ಟ ಬಗ್ಗೆ ಹಾಗೂ ಆರೋಪಿಯ ವಿರುದ್ಧ ದೂರು ದಾಖಲಿಸಿದ ಬಗ್ಗೆ ಹೇಳಿಲ್ಲ. ದಿಃ 15.06.2022 ರಂದು ನಾನು ರಜೆಯಲ್ಲಿದ್ದೆ. ಆ ಬಗ್ಗೆ ಹಾಜರಾತಿ ಪುಸ್ತಕವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಆರೋಪಿಗೆ ನಾನು ನಗದಾಗಿ ಹಣ ಕೊಟ್ಟಿದ್ದೇನೆ. ಯಾವುದೇ ಒಬ್ಬ ವ್ಯಕ್ತಿಯೊಂದಿಗೆ ರೂ. 19,999 ಕ್ಕೂ ಹೆಚ್ಚಿನ ಹಣಕಾಸಿನ ವ್ಯವಹಾರ ಮಾಡಬೇಕಾದರೆ ಚೆಕ್ ಅಥವಾ RTGS ಮೂಲಕ ಮಾಡಬೇಕು ಎಂದರೆ ಸರಿ. ನಾನು ಸಾಲ ಕೊಟ್ಟಿದ್ದೇನೆ ಎನ್ನುವ ಹಣವನ್ನು ಚೆಕ್ ಅಥವಾ RTGS ಮೂಲಕ ಕೊಟ್ಟಿಲ್ಲ. ಹಣ ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಚೆಕ್ ಹಾಜರುಪಡಿಸಿದ್ದೇನೆ. ಚೆಕ್ಕನ್ನು ಹೊರತುಪಡಿಸಿ ಬೇರೆ ದಾಖಲೆ ಹಾಜರುಪಡಿಸಿಲ್ಲ. ನಾನು

ಹಣ ಕೊಟ್ಟಿದ್ದೇನೆ ಎನ್ನುವ 15–20 ದಿನ ಮೊದಲೇ ಹಣಕಾಸಿನ ಮಾತುಕತೆ ನಮ್ಮ ನಡುವೆ ಆಗಿದೆ. ಆ ಮಾತುಕತೆ ನಮ್ಮ ಮತ್ತು ಆರೋಪಿಯ ಮನೆಯಲ್ಲಿ ಆಯಿತು. 2021 ಡಿಸೆಂಬರ್ 25–26 ಹಾಗೂ 2022ರ ಜನವರಿ ತಿಂಗಳಲ್ಲಿಯೂ ಕೂಡ ಮಾತುಕತೆ ಮಾಡಿದ್ದಾರೆ. ನಾನು ಕರ್ತವ್ಯ ಮುಗಿಸಿದ ನಂತರ ಮಾತುಕತೆ ಮಾಡಿದ್ದೇನೆ. ಆ ದಿನ ನಾನು ಕರ್ತವ್ಯದಲ್ಲಿ ಇರಲಿಲ್ಲ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸಂಜೆ ಸುವಾರು 4.30 ರಿಂದ 5 ಗಂಟೆಗೆ ಮಾತುಕತೆಯಾಗಿದೆ. ಸಂಜೆ 4.30 ರಿಂದ 5 ಗಂಟೆಗೆ ಹಣ ಕೊಟ್ಟಿದ್ದೇನೆ. ನನ್ನ ಮತ್ತು ಆರೋಪಿಯ ಮಧ್ಯೆ ಬಡ್ಡಿ ವ್ಯವಹಾರವಾದ ಬಾಬ್ತು ದಾಖಲೆ ಹಾಜರುಪಡಿಸಿಲ್ಲ. ಆರೋಪಿ ನನಗೆ ಬಡ್ಡಿ ಕೊಟ್ಟಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಶೇಕಡಾ 1ರ ಬಡ್ಡಿಯನ್ನು ಕೊಡುವುದಾಗಿ ಆರೋಪಿ ಹೇಳಿದ್ದಾರೆ. ನಾನು ಬಡ್ಡಿ ಕೇಳಿಲ್ಲ. ನನಗೆ ಆರೋಪಿ ಸುಮಾರು ವರ್ಷಗಳಿಂದ ಪರಿಚಯ. ದಿಃ 15.06.2022 ರಂದು ನ್ನ ಬಳಿ ರೂ.3ವರೆ ಲಕ್ಷ ಹಣ ಇತುತ ಎಂದು ತೋರಿಸಲು ಬ್ಯಾಂಕ್ ಸ್ಟೇಟ್‌ಮಂಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನಗೆ ಈಗ ತಿಂಗಳಿಗೆ ರೂ.46 ಸಾವಿರ ಸಂಬಳ ಬರುತ್ತದೆ. ನನಗೆ ಇಬ್ಬರು ಮಕ್ಕಳಿದ್ದಾರೆ. ಮಗಳು ಈಗ ಪ್ರಥಮ ಪಿ.ಯು.ಸಿ. ಮಗ 5ನೇ ತರಗತಿ ಓದುತ್ತಿದ್ದಾರೆ. ಅವರಿಬ್ಬರು ಟ್ಯಾಲೆಂಟ್ ಖಾಸಗೀ ವಿದ್ಯಾಸಂಸ್ಥೆಯಲ್ಲಿ ಓದುತ್ತಿದ್ದಾರೆ. ಮಗಳಿಗೆ ರೂ.40 ಸಾವಿರ ಮತ್ತು ಮಗನಿಗೆ ರೂ.32 ಸಾವಿರ ಶಾಲಾ ಶುಲ್ಕ ಇದೆ. ನಾನು, ನನ್ನ ಪತ್ನಿ ಮತ್ತು ಮಕ್ಕಳು ಮಾತ್ರ ಇದ್ದೇವೆ. ನನಗೆ ತಿಂಗಳಿಗೆ 10 ಸಾವಿರದವರೆಗೆ ಮನೆ ಖರ್ಚು ಬರುತ್ತದೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.